**ಸಾಕ್ಷಿಯನ್ನು ದಿಃ 09.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1,2,5,7 ಮತ್ತು 8ನೇ ಆರೋಪಿತರ ಪರ ಶ್ರೀ ಸಿ ಎಸ್ ಡಿ ವಕೀಲರಿಂದಃ**

1) ನಾನು ಹೂಡಿರುವ ಸಿವಿಲ್ ದಾವೆಯಲ್ಲಿ ಆರೋಪಿತರೆಲ್ಲರೂ ಪಕ್ಷಗಾರರಲ್ಲ ಎಂದರೆ ಸರಿಯಲ್ಲ. ಎಲ್ಲಾ ಆರೋಪಿತರ ವಿರುದ್ಧ ನ್ಯಾಯಾಲಯದಲ್ಲಿ ನಿರ್ಭಂಧಕಾಂಜ್ಞೆ ಆದೇಶ ಆಗಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರಿಗೆ ನ್ಯಾಯಾಲಯಕ್ಕೆ ನೀಡಿರುವ ದಾಖಲೆಗಳನ್ನು ನೀಡಿಲ್ಲ ಎಂದರೆ ಸರಿ. ದಿಃ 14.08.2013 ರಂದು ಗಲಾಟೆ ಆಗುತ್ತಿದೆ ಎಂದು ಬೆಳಗ್ಗೆ 11.45 ರ ಸಮಯದಲ್ಲಿ ನನ್ನ ಮಗ ತಿಳಿಸಿರುತ್ತಾರೆ. ತಕ್ಷಣ ನಾನು ಸ್ಥಳಕ್ಕೆ ಹೋಗಿಲ್ಲ, ರಾತ್ರಿ 9.30 ಕ್ಕೆ ಭೇಟಿ ನೀಡಿರುತ್ತೇನೆ.

2) ದಿಃ 14.08.2013 ರಂದು ನನ್ನ ಮಗ ಈ ಪ್ರಕರಣದ ಆರೋಪಿಗಳಾದ ನಾಗಪ್ಪ, ನವೀನ ಮತ್ತು ಇತರರ ವಿರುದ್ಧ ಒಂದು ದೂರನ್ನು ನೀಡಿದ್ದು ಪ್ರಕರಣ ಈಗ ತೀರ್ಮಾನವಾಗಿದೆ ಎಂದರೆ ಗೊತ್ತಿಲ್ಲ. 8ನೇ ಆರೋಪಿ ನನ್ನ ಮಕ್ಕಳ ವಿರುದ್ಧ ಸಿಸಿ ನಂ. 438/2014 ರಂತೆ ಪ್ರಕರಣ ದಾಖಲಿಸಿದ್ದರು ಎಂದರೆ ಗೊತ್ತಿಲ್ಲ. ನಾನು ಬಂದು ನೋಡಿದಾಗ ನನ್ನ ಹೆಂಡತಿ ಮಕ್ಕಳು ಮನೆಯಲ್ಲಿ ಇದ್ದರು. ನಾನು ಗಲಾಟೆಯನ್ನು ಖುದ್ದಾಗಿ ನೋಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ನನ್ನ ಮಗ ವಿಡಿಯೋದಲ್ಲಿ ತೋರಿಸಿರುತ್ತಾರೆ.

3) ನಮ್ಮ ಮನೆಯ ಪಕ್ಕ ಇರುವ ಜಾಗದ ಸಂಬಂಧ ವ್ಯಾಜ್ಯ ಇದೆ ಎಂದರೆ ಸರಿ. ದಾರಿಯ ವಿಚಾರವಾಗಿ ಸಾರ್ವಜನಿಕರು ಮತ್ತು ನಮ್ಮ ನಡುವೆ ವ್ಯಾಜ್ಯ ನಡೆಯುತ್ತಿದೆ ಎಂದರೆ ಸರಿಯಲ್ಲ. ಸದರಿ ಜಾಗಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ನಾವೇ ತೊಂದರೆ ನೀಡುತ್ತಿದ್ದೇವೆ

ಎಂದರೆ ಸರಿಯಲ್ಲ. ಆರೋಪಿತರು ನನ್ನ ಮಗನಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಅವಮಾನ ಮಾಡಿಲ್ಲ ಎಂದರೆ ಸರಿಯಲ್ಲ. ನಮಗೆ ಸೇರಿದ ಯಾವುದೇ ಆಸ್ತಿಗೆ ಆರೋಪಿತರು ನಷ್ಟ ಉಂಟುಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಏಕಾಏಕಿ ನನ್ನ ಮನೆಯ ಒಳಗೆ ಪ್ರವೇಶ ಮಾಡಿರುತ್ತಾರೆ ಎಂದು ನನ್ನ ಮಗ ನನಗೆ ತಿಳಿಸಿರುತ್ತಾರೆ. ಸಾಕ್ಷಿ ಮುಂದುವರೆದು 3 ಆರೋಪಿತರು ಮಾತ್ರ ಮನೆಯ ಒಳಗೆ ಪ್ರವೇಶ ಮಾಡಿರುತ್ತಾರೆ. ಯಾವುದೇ ಆರೋಪಿ ನನ್ನ ಮನೆಯ ಒಳಗೆ ಪ್ರವೇಶ ಮಾಡಿಲ್ಲ ಮತ್ತು ನನ್ನ ಮಕ್ಕಳ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ.

4) ನನ್ನ ಹೆಂಡತಿ ಮತ್ತು ಮಕ್ಕಳು ಆಸ್ಪತ್ರೆಯಲ್ಲಿ ಯಾವುದೇ ಚಿಕಿತ್ಸೆ ಸಹ ಪಡೆದಿಲ್ಲ ಎಂದರೆ ಸರಿಯಲ್ಲ. ನಾವು ನೀಡಿದ್ದ ದೂರಿನಲ್ಲಿ ಯಾವುದೇ ಹುರುಳು ಇಲ್ಲ ಎಂಬ ಕಾರಣಕ್ಕೆ ಪೋಲಿಸರು ನನ್ನಿಂದ ದೂರನ್ನು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ಸಾರ್ವಜನಿಕರು ಉಪಯೋಗಿಸುತ್ತಿದ್ದು ಅವರಿಗೆ ಭಯ ಹುಟ್ಟಿಸುವುದರಿಂದ ಈ ರೀತಿ ಖಾಸಗಿ ದೂರನ್ನು ದಾಖಲಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 3,4 ಮತ್ತು 6 ನೇ ಆರೋಪಿತರ ಪರ ಶ್ರೀ ಬಿ ಸಿ ಎಂ ವಕೀಲರಿಂದಃ</u>**

5) ನಾನು 2002 ರಲ್ಲಿ ಮನೆಯನ್ನು ನಿರ್ಮಿಸಿರುತ್ತೇನೆ. ನಮ್ಮ ಮನೆಗೆ ದಕ್ಷಿಣ ದಿಕ್ಕಿನಲ್ಲಿ ಕಾಂಪೌಂಡ್ ನಿರ್ಮಿಸಿಲ್ಲ. ನಮ್ಮ ಮನೆಯ ಪೂರ್ವಕ್ಕೆ ಚರಂಡಿ ನಿರ್ಮಿಸಿದ್ದರು ಎಂದರೆ ಸರಿಯಲ್ಲ. 2003 ರಲ್ಲಿ ನಾನು ಚರಂಡಿ ಜಾಗ ಸೇರಿಸಿಕೊಂಡು ಕಲ್ಲುಕಂಬ ನೆಡಲು

ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಕಲ್ಲುಕಂಬವನ್ನು 1997 ರಲ್ಲಿಯೇ ನೆಟ್ಟಿದ್ದೆವು ಎನ್ನುತ್ತಾರೆ.

6) ಸದರಿ ಗಲಾಟೆಯಲ್ಲಿ 7-8 ಜನ ಸೇರಿದ್ದರು ಎಂದು ತಿಳಿದುಕೊಂಡಿರುತ್ತೇನೆ. ನಾನು ದಿಃ 14.08.2013 ರಂದು ಗಲಾಟೆ ಸಂಬಂಧ ನಾನು ಪೋಲಿಸ್ ಠಾಣೆಗೆ ದೂರನ್ನು ನೀಡಿದ್ದು ಪೋಲೀಸರು ತನಿಖೆಯನ್ನು ಕೈಗೊಂಡು ಬಿ ರಿಪೋರ್ಟ್ ಹಾಕಿರುತ್ತಾರೆ ಎಂದರೆ ಸರಿಯಲ್ಲ. 3,4 ಮತ್ತು 6ನೇ ಆರೋಪಿತರು ಹೆಂಡತಿ ಮತ್ತು ಮಕ್ಕಳ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ನೀಡಲು ಸುಳ್ಳು ಖಾಸಗಿ ನೀಡಿ ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(**10ನೇ ಆರೋಪಿ ಪರ ವಕೀಲರು ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು**).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**